ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು	:	ಶ್ರೀ ಎಂ.ಎಲ್.ಅನಿಲ್ ಕುಮಾರ್
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1821**
ಉತ್ತರಿಸಬೇಕಾದ ದಿನಾಂಕ	:	**15–03–2022**
ಉತ್ತರಿಸಬೇಕಾದ ಸಚಿವರು	:	ಸಹಕಾರ ಸಚಿವರು

ಕ.ಸಂ	ಪ್ರಶ್ನೆ	ಉತ್ತರ
ಅ)	ಕರ್ನಾಟಕ ರಾಜ್ಯ ಸಹಕಾರಿ ಅಧಿನಿಯಮದಡಿ ಒಟ್ಟು ಎಷ್ಟು ಸಹಕಾರಿ ಬ್ಯಾಂಕುಗಳು ನೋಂದಾಯಿತವಾಗಿವೆ; (ಜಿಲ್ಲಾವಾರು ಮಾಹಿತಿ ನೀಡುವುದು)	ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರಡಿಯಲ್ಲಿ ಒಟ್ಟು 262 ಪಟ್ಟಣ ಸಹಕಾರ ಬ್ಯಾಂಕುಗಳು ನೋಂದಾಯಿತವಾಗಿವೆ. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರಡಿ 21 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು ಹಾಗೂ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನೋಂದಣಿಯಾಗಿವೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.
ಆ)	ಇಲ್ಲಿಯವರೆಗೆ ನೋಂದಾವಣಿಯಾದ ಎಷ್ಟು ಸಹಕಾರಿ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿವೆ;	ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರಡಿಯಲ್ಲಿ ಒಟ್ಟು 262 ಪಟ್ಟಣ ಸಹಕಾರ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿವೆ. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರಡಿ 21 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು ಹಾಗೂ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಕಾರ್ಯನಿರ್ವಹಿಸುತ್ತಿವೆ. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-01** ರಲ್ಲಿ ನೀಡಲಾಗಿದೆ.
ಇ)	ನೋಂದಾಯಿತ ಬ್ಯಾಂಕ್‌ಗಳಲ್ಲಿ ಎಷ್ಟು ಬ್ಯಾಂಕುಗಳು ನಷ್ಟದಲ್ಲಿವೆ; ಮತ್ತು ಅವುಗಳ ಪುನಃಶ್ಚೇತನಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ:	• 262 ಪಟ್ಟಣ ಸಹಕಾರ ಬ್ಯಾಂಕುಗಳ ಪೈಕಿ 221 ಪಟ್ಟಣ ಸಹಕಾರ ಬ್ಯಾಂಕುಗಳು ಲಾಭದಲ್ಲಿದೆ. 41 ಪಟ್ಟಣ ಸಹಕಾರ ಬ್ಯಾಂಕುಗಳು ನಷ್ಟದಲ್ಲಿವೆ. • ನಷ್ಟದಲ್ಲಿರುವ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಂಬಂಧಿಸಿದಂತೆ ಸಹಕಾರ ಸಂಘಗಳ ನಿಬಂಧಕರು ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ನ ಮಟ್ಟದಲ್ಲಿ ಪರಾಮರ್ಶೆ ನಡೆಸಿ ಸಲಹೆ ಸೂಚನೆಗಳನ್ನು ನೀಡಲಾಗುತ್ತದೆ. • ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಲಾಭದಲ್ಲಿದೆ. 21 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಪೈಕಿ 20 ಕೇಂದ್ರ ಸಹಕಾರ

		ಬ್ಯಾಂಕುಗಳು ಲಾಭದಲ್ಲಿದ್ದು, ಕಲಬುರಗಿ ಮತ್ತು ಯಾದಗಿರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಮಾತ್ರ ನಷ್ಟದಲ್ಲಿರುತ್ತದೆ.
		ನಷ್ಟದಲ್ಲಿರುವ ಕಲಬುರಗಿ ಮತ್ತು ಯಾದಗಿರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ. ಈ ಬ್ಯಾಂಕಿನ ಪುನಶ್ಚೇತನಕ್ಕೆ ಸಂಬಂಧಿಸಿದಂತೆ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ. • ನಬಾರ್ಡ್‌ನ ಅಂಗ ಸಂಸ್ಥೆಯಾದ ನ್ಯಾಬ್ಕೋನ್ಸ್‌ನಿಂದ ಪುನಃಶ್ಚೇತನ ವರದಿ ಪಡೆದು ಅದರತೆ ಪುನಃಶ್ಚೇತನ ಯೋಜನೆ ರೂಪಿಸಲಾಗಿದೆ. • ರಾಜ್ಯ ಸರ್ಕಾರದಿಂದ ರೂ.10.10 ಕೋಟಿಗಳ ಷೇರು ಮೊತ್ತವನ್ನು ಬ್ಯಾಂಕಿಗೆ ಬಿಡುಗಡೆ ಮಾಡಿದೆ. • ಇದರಿಂದ ಬ್ಯಾಂಕಿನ Barrowing Power ವೃದ್ಧಿಯಾಗಿರುತ್ತದೆ. • ಅಪೆಕ್ಸ್ ಬ್ಯಾಂಕಿನ ಸ್ವಂತ ಬಂಡವಾಳದಿಂದ ರೂ. 180 ಕೋಟಿ ಸಾಲ ಮಂಜೂರು ಮಾಡಿ ರೈತರಿಗೆ ಅಲ್ಪಾವಧಿ ಸಾಲ ವಿತರಿಸಲಾಗಿದೆ. • ಬ್ಯಾಂಕಿನ ಆರ್ಥಿಕ ಪರಿಸ್ಥಿತಿ ಸುಧಾರಿಸಿದ್ದರಿಂದ ಪ್ರಸಕ್ತ ಸಾಲಿನಲ್ಲಿ ನಬಾರ್ಡ್‌ನಿಂದ ರೂ.90.00 ಕೋಟಿ ಸಾಲ ಪಡೆಯಲು ಅವಕಾಶವಾಗಿರುತ್ತದೆ. • ದಿನಾಂಕ: 31-01-2020ಕ್ಕೆ ಸುಸ್ತಿಯಾದ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲಗಳ ಅಸಲನ್ನು ಮರುಪಾವತಿಸಿದ್ದಲ್ಲಿ ಬಡ್ಡಿ ಮನ್ನಾ ಯೋಜನೆ ಜಾರಿಗೊಳಿಸಿದ್ದು, ಇದರಿಂದ 1094 ರೈತರಿಗೆ ರೂ.18.67 ಕೋಟಿ ಮೊತ್ತದ ಬಡ್ಡಿಮನ್ನಾ ಬಿಡುಗಡೆ ಮಾಡಿದ್ದು, ಇದರಿಂದ ಸಾಲ ವಸೂಲಾತಿ ಪ್ರಮಾಣ ಹೆಚ್ಚಿ ಎನ್.ಪಿ.ಎ ಕಡಿಮೆಯಾಗಿದೆ.
ಈ)	ಸಹಕಾರಿ ಬ್ಯಾಂಕ್‌ಗಳಲ್ಲಿ ಇತ್ತೀಚಿಗೆ ಅವ್ಯವಹಾರಗಳು ಹೆಚ್ಚಾಗಿದ್ದು ಠೇವಣಿದಾರರು ಆಂತಕದಲ್ಲಿದ್ದು, ಅದರ ರಕ್ಷಣೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?	ಸಹಕಾರಿ ಸಂಸ್ಥೆಗಳಲ್ಲಿ ಠೇವಣಿ ತೊಡಗಿಸುವ ಠೇವಣಿದಾರರ ಹಿತ ಕಾಪಾಡುವ ಜವಾಬ್ದಾರಿ ಆಯಾ ಸಹಕಾರ ಸಂಘದ ಆಡಳಿತ ಮಂಡಳಿ ಆಗಿರುತ್ತದೆ. ಸಹಕಾರಿ ಬ್ಯಾಂಕುಗಳಲ್ಲಿ ಠೇವಣಿದಾರರಿಗೆ ವಂಚನೆಯಾದ ಸಂದರ್ಭದಲ್ಲಿ ಡಿಐಸಿಜಿಸಿ ವಿಮಾ ಸಂಸ್ಥೆಯು ವಿಮಾ ಹಣವನ್ನು ಪಾವತಿಸುತ್ತದೆ. ರಾಜ್ಯದಲ್ಲಿನ ಕೆಲವು ಸಹಕಾರ ಬ್ಯಾಂಕುಗಳು ಅಧಿಕ ಬಡ್ಡಿ ದರದ ಆಮಿಷದಿಂದ ಠೇವಣಾತಿ ಸಂಗ್ರಹಿಸಿ ವಂಚಿಸುತ್ತಿರುವುದು ಕಂಡು ಬಂದಿದೆ. ಸಹಕಾರ ಬ್ಯಾಂಕುಗಳಲ್ಲಿ ಅವ್ಯವಹಾರ ಉಂಟಾದಲ್ಲಿ ಪ್ರಕರಣ 64 ರ ವಿಚಾರಣೆ ಅಥವಾ ಪ್ರಕರಣ 65 ರ ಪರಿವೀಕ್ಷಣೆ ನಡೆಸಲಾಗುವುದು. ಪ್ರತಿ

		ವರ್ಷ ಲೆಕ್ಕಪರಿಶೋಧನೆ ನಡೆಸಲಾಗುವುದು. ಅಂತಹ ಸಂದರ್ಭದಲ್ಲಿ ಕಂಡು ಬಂದ ಲೋಪದೋಷಗಳನ್ನು, ನ್ಯೂನತೆಗಳನ್ನು ಸರಿಪಡಿಸಲು ಪ್ರಕರಣ 68 ರಡಿಯಲ್ಲಿ ನಿರ್ದೇಶನ ನೀಡಲಾಗುವುದು. ಒಂದು ವೇಳೆ ಈ ನಿರ್ದೇಶನ ಪಾಲಿಸದಿದ್ದಲ್ಲಿ ಅಂತಹ ಸಂಘದ ಆಡಳಿತ ಮಂಡಳಿ ಸದಸ್ಯರು, ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುತ್ತದೆ. ಪ್ರಸ್ತುತ ಪಟ್ಟಣ ಸಹಕಾರ ಬ್ಯಾಂಕುಗಳು ಸಂಗ್ರಹಿಸುವ ಠೇವಣಿ ಮತ್ತು ಸಾಲ ಮತ್ತು ಮುಂಗಡಗಳ ಮೇಲೆ ಬಡ್ಡಿ ದರವನ್ನು ವಿಧಿಸುವ ಅಧಿಕಾರ ಆಯಾ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ದತ್ತವಾಗಿದೆ. ಈ ರೀತಿ ಬಡ್ಡಿ ದರ ವಿಧಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಅಧಿಕಾರ ನೀಡಿದ್ದು, ಈ ಅಧಿಕಾರವನ್ನು ಸದುಪಯೋಗಪಡಿಸಿಕೊಂಡು ವಿವೇಚನಾಯುಕ್ತವಾಗಿ ಬಡ್ಡಿ ದರವನ್ನು ನಿಗದಿಪಡಿಸದಿರುವುದು ಸಹ ಗಮನಕ್ಕೆ ಬಂದಿದ್ದು, ಬ್ಯಾಂಕಿಂಗ್ ರೆಗ್ಯುಲೇಷನ್ ಅಧಿನಿಯಮ 1949 ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಠೇವಣಾತಿಗಳು ಮತ್ತು ಸಾಲ ಮತ್ತು ಮುಂಗಡಗಳ ಮೇಲೆ ಬಡ್ಡಿ ದರವನ್ನು ನಿಗದಿಪಡಿಸುವ ಅಧಿಕಾರವನ್ನು ಭಾರತೀಯ ರಿಸರ್ವ್ ಬ್ಯಾಂಕ್ ಹೊಂದಲು ಹಾಗೂ ಚಲಾಯಿಸಲು ಕೋರಿ ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ: ಯುಬಿಸಿ-7/ ಯುಸಿಎಸ್/95/2020-21 ದಿನಾಂಕ 10-11-2021 ರಂದು ಭಾರತೀಯ ರಿಸರ್ವ್ ಬ್ಯಾಂಕಿಗೆ ಪತ್ರ ಬರೆಯಲಾಗಿದೆ.

ಸಂಖ್ಯೆ: ಸಿಒ 37 ಸಿಆರ್‌ಸಿ 2022

(ಎಸ್.ಟಿ. ಸೋಮಶೇಖರ್)

ಸಹಕಾರ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1821 ಕ್ಕೆ ಅನುಬಂಧ

ಕ್ರ. ಸಂ.	ಜಿಲ್ಲೆಯ ಹೆಸರು	ಪಟ್ಟಣ ಸಹಕಾರ ಬ್ಯಾಂಕುಗಳು (ಸೌಹಾರ್ದ ಬ್ಯಾಂಕುಗಳ ಸೇರಿ)	ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಹಾಗೂ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್
1	ಬೆಂಗಳೂರು	47	ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ + ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು =2
2	ಬೆಂಗಳೂರು ಗ್ರಾಮಾಂತರ	2	0
3	ರಾಮನಗರ	2	0
4	ತುಮಕೂರು	12	1
5	ಚಿತ್ರದುರ್ಗ	3	1
6	ಕೋಲಾರ	0	1
7	ಚಿಕ್ಕಬಳ್ಳಾಪುರ	0	0
8	ಶಿವಮೊಗ್ಗ	8	1
9	ದಾವಣಗೆರೆ	12	1
10	ಮೈಸೂರು	10	1
11	ಮಂಡ್ಯ	3	1
12	ಹಾಸನ	5	1
13	ಕೊಡಗು	3	1
14	ದಕ್ಷಿಣ ಕನ್ನಡ	8	1
15	ಚಿಕ್ಕಮಗಳೂರು	3	1
16	ಚಾಮರಾಜನಗರ	1	0
17	ಉಡುಪಿ	7	0
18	ಬೆಳಗಾವಿ	40	1
19	ವಿಜಯಪುರ	17	1
20	ಧಾರವಾಡ	11	1
21	ಉತ್ತರ ಕನ್ನಡ	9	1
22	ಹಾವೇರಿ	9	0
23	ಗದಗ	7	0
24	ಬಾಗಲಕೋಟೆ	13	1
25	ಕಲಬುರಗಿ	8	1
26	ರಾಯಚೂರು	3	1

27	ಬೀದರ್	5	1
28	ಬಳ್ಳಾರಿ	7	1
29	ಕೊಪ್ಪಳ	7	0
30	ಯಾದಗಿರಿ	0	0
	ಒಟ್ಟು	**262**	**22**

ಸಹಕಾರ ಸಂಘಗಳ ಜಂಟಿ ನಿಬಂಧಕರು
(ಪಟ್ಟಣ ಬ್ಯಾಂಕುಗಳ ವಿಭಾಗ)